ಸಕ್ಕರೆ ಕಾರ್ಖಾನೆ ಮುಂಭಾಗ ಹಾದು ಹೋಗುವುದರಿಂದ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಎತ್ತಿನಗಾಡಿ, ಲಾರಿಗಳು, ರಸ್ತೆಯಲ್ಲಿ ನಿಲ್ಲುವುದರಿಂದ ಕಬ್ಬಿನ ಕಸ ಮತ್ತು ದನ–ಕರುಗಳ ಕಸ ಸೇರಿ ರಸ್ತೆಯು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 2011–12ನೇ ಸಾಲಿನ ಮುಂಗಾರು ಪೂರ್ವ ನಿರ್ವಹಣೆಗೆ ನೀಡಲಾಗಿದ್ದ ಅನುದಾನದಲ್ಲಿ ರೂ.2.00 ಲಕ್ಷಗಳನ್ನು ವೆಚ್ಚ ಮಾಡಿ 900 ಮೀಟರ್ ರಸ್ತೆಗಳ ಗುಂಡಿ ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿರುತ್ತದೆ.

ಇ) ಮಂಡ್ಯ ಗುತ್ತಲು ಮುತ್ತತ್ತಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಅನುದಾನ ಬಿಡುಗಡೆಯಾಗಿರುತ್ತದೆ.

ಉ) ರೂ.2.00 ಲಕ್ಷಗಳ ಅನುದಾನವನ್ನು 900 ಮೀಟರ್ ರಸ್ತೆಗಳ ನಿರ್ವಹಣೆಗೆ ಬಿಡುಗಡೆ ಮಾಡಲಾಗಿದೆ.

ಕುಡಿಯುವ ನೀರು ಸರಬರಾಜು

261 (540) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಪ್ಪಳ ನಗರಕ್ಕೆ ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರು ಸರಬರಾಜಿಗಾಗಿ ರೂ. 54.56 ಕೋಟಿಗಳ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆಯು ದೊರಕಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯ ಟೆಂಡರ್ ಪ್ರಕ್ರೀಯೆಯನ್ನು ಇದುವರೆವಿಗೂ ಪೂರ್ಣಗೊಳಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಕಾಮಗಾರಿಯನ್ನು ಚಾಲನೆ ಮಾಡದಿರಲು ಕಾರಣಗಳೇನು (ವಿವರಗಳನ್ನು ನೀಡುವುದು) ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ಬಂದಿದೆ

ಅ) ಬಂದಿದೆ

ಇ) ಈ ಯೋಜನೆಯ ಕಾಮಗಾರಿಗೆ ದಿನಾಂಕ 31–03–2011 ರಂದು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಅದರಂತೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಟೆಂಡರನ್ನು ದಿನಾಂಕ: 30–12–2011 ರಂದು ನಡೆದ ಕ.ನ.ನೀ.ಸ ಮತ್ತು ಒ.ಚ. ಮಂಡಳಿಯ ಸಭೆಯಲ್ಲಿ ಮಂಡಿಸಲಾಗಿತ್ತು. ಮಂಡಳಿಯು ತಾಂತ್ರಿಕ ಕಾರಣಗಳ ಮೇರೆಗೆ ಈ ಟೆಂಡರನ್ನು ತಿರಸ್ಕರಿಸಿ ಹೊಸ ಟೆಂಡರ್ ಪ್ರಕಟಣೆ ಹೊರಡಿಸಲು ತೀರ್ಮಾನಿಸಿರುತ್ತದೆ. ಅದರಂತೆ ಯೋಜನೆಯ ಕಾಮಗಾರಿಗೆ ದಿನಾಂಕ: 12–01–2012 ರಂದು ಮರು ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಉದ್ಯಾನವನ ಅಭಿವೃದ್ಧಿ

262 (541) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ತೋಟಗಾರಿಕೆ ಮತ್ತು ಸಕ್ಕರೆ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಪ್ಪಳ ನಗರದಲ್ಲಿರುವ ಹುಲಿಕೆರೆ ಮತ್ತು ಹೊಸದಾಗಿ ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಬಗ್ಗೆ ಪ್ರಸ್ತಾವನೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲು ನಿಗದಿ ಪಡಿಸಲಾಗುವ ಅನುದಾನದ ಮೊತ್ತವೆಷ್ಟು ; ಈ ಅನುದಾನವನ್ನು ಪ್ರಸಕ್ತ ಸಾಲಿನಲ್ಲಿ ಮಂಜೂರು ಮಾಡಲಾಗುವುದೇ ?

ಇ) ಈ ಹುಲಿಕೆರೆ ಮತ್ತು ಹೊಸದಾಗಿ ಉದ್ಯಾನವನವನ್ನು ಅಭಿವೃದ್ಧಿಯ ಜೊತೆಗೆ ಮೂಲ ಭೂತ ಸೌಕರ್ಯಗಳಾದ ಯಾಂತ್ರಿಕ ದೋಣಿ ಸೌಲಭ್ಯ ಫುಟ್ ಪಾತ್ ನಿರ್ಮಾಣ, ವಾಯು ವಿಹಾರಕ್ಕೆ ಗಾರ್ಡನ್ ನಿರ್ಮಾಣಕ್ಕೆ ಪ್ರಸ್ತಾವನೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಮೂಲಭೂತ ಸೌಕರ್ಯಗಳಿಗೆ ಬಿಡುಗಡೆ ಮಾಡಲಾಗುವ ಅನುದಾನದ ಮೊತ್ತವೆಷ್ಟು ?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಮತ್ತು ಸಕ್ಕರೆ ಸಚಿವರು):–

ಅ) ಈ ಪ್ರಸ್ತಾವನೆ ತೋಟಗಾರಿಕೆ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ